ತಾರೀಖು 2ನೆ ಮಾರ್ಚಿ 1904.

ನಂ. ರೆ. 2610–ರೆ. ಫೈ. 67—1896, ಅಫಿಷಿಯಟಿಂಗ್ ಡೆಪ್ಯುಟಿ ಕಮಿಷನರಾದ ಮೆ|| ಎ. ವೆಂಕಟರಾಯರು 1904ನೆ ಫೆಬ್ರವರಿ 21ನೆ ತಾರೀಖಿನ ಪೂರ್ವಾನ್ಹದಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟ್ ವ ಟ್ರೆಜರಿ ಚಾರ್ಜನ್ನು ಡೆಪ್ಯುಟಿ ಕಮಿಷನರಾದ ಮೆ|| ಎಂ. ಎಸ್. ನಾರಾಯಣರಾಯರಿಗೆ ಒಪ್ಪಿಸಿರುತ್ತಾರೆ.

ತಾರೀಖು 3ನೆ ಮಾರ್ಚಿ 1904.

ನಂ. ರೆ. 2617, ಮೈಸೂರ ಶೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುವದೇನೆಂದರೆ, ಜನರಲ್ ರಜಾದಿನವಾಗಿ ಆಚರಿಸಲ್ಪಡತಕ್ಕ ಶ್ರೀಮತ್ ಮಹಾರಾಜ ಚಕ್ರವರ್ತಿಗಳವರ ವರ್ಧಂತಿಯು, ಇತರಪರ ಸಂಸ್ಥಾನಾಮುಳಿ ಜೂ 26ನೆ ತಾರೀಖಿನಲ್ಲಿ, ಅಥವಾ ಸದರೀ ದಿನವು ಭಾನುವಾರವಾದ ಪಕ್ಷದಲ್ಲಿ ಜೂ 27ನೆ ತಾರೀಖಿನಲ್ಲಿ ಆಚರಿಸಲ್ಪಡತಕ್ಕದ್ದು. ಅದರಂತೆ ಈ ವರುಷವು 1904ನೆ ಜೂ 27ನೆ ತಾರೀಖಿನಲ್ಲಿ ಆಚರಿಸಲ್ಪಡತಕ್ಕದ್ದು.

ತಾರೀಖು 7ನೆ ಮಾರ್ಚಿ 1904.

ನಂ. 599—ಎಕ್ಸೈ. ಫೈ. 2–1901, ಮೈಸೂರು ಸರ್ವಿಸ್ ರೆಗ್ಯುಲೇಷ್ಗಳ 188ನೆ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ವ ಚಿತ್ರದುರ್ಗ ಡಿಸ್ಟ್ರಿಕ್ಟ್ಗಳ ಎಕ್ಸೈಜ್ ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ಶಾಮಣ್ಣ, ಬಿ. ಎ., ಎಲ್. ಸಿ. ಇ., ಯವರಿಗೆ 1904ನೆ ಮಾರ್ಚಿ ಗುರ್ರೆ ತಾರೀಖಿನ ಲಾಗಾಯತು ಯೂ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾಕೊಡಲ್ಪಟ್ಟಿರುತ್ತದೆ.

ಹುಕುಂ ಬವೋಜೀಬ್,
ಎಲ್. ಅನಂತಸ್ವಾಮಿರಾವ್,
ಜನರಲ್ ವ ರವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್‌ನಾಮೊ.

ತಾರೀಖು 4ನೆ ಮಾರ್ಚಿ 1904.

ನಂ. 272—1528, ಹಾಸನದ ಡಿವೀಜನಿನ ಎಕ್ಜಿಕ್ಯೂಟಿವ್ ಇಂಜನಿಯರಾದ ಮೆ|| ಸಿ. ಎ. ಮಹದೇವ ಶಾಸ್ತ್ರಿಯವರಿಗೆ ಮೊಹಿಮಜಕೂರು 19ನೆ ತಾರೀಖಿನ ಲಾಗಾಯತು ಯೂ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 8 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬವೋಜೀಬ್,
ಡಬ್ಲ್ಯೂ. ಎಸ್. ಟ್ರೀಲ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನ್ಮೆಂಟ್ ಅಂಡರ್ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್‌ನಾಮೊ.

ತಾರೀಖು 4ನೆ ಮಾರ್ಚಿ 1904.

ನಂ. 2641, ಮು|| ರಾ|| ರಾ|| ಅಕಂಣನವರು, ಮೃತಪಟ್ಟ ತಮ್ಮ ತಂದೆಯಾದ ಸುಬ್ಬಂಣನವರಿಗೆ ಬದಲಾಗಿ ಮೈಸೂರು ಪಹರ್ ನಜರಬಾದ್‌ನಲ್ಲಿರುವ ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಗೆ ಧರ್ಮದರ್ಶಿಗಳಾಗಿ ನೊಕರಮ್ಮಾಡಲ್ಪಟ್ಟಿರುತ್ತಾರೆ.

ತಾರೀಖು 5ನೆ ಮಾರ್ಚಿ 1904.

ನಂ. 2664, ಚಿಕ್ಕನಾಯಿಕನಹಳ್ಳಿ ತಾಲ್ಲೂಕಿನ ವಡೇರಹಳ್ಳಿಯಲ್ಲಿರುವ ಹೆಂಜೆರೆ ಭೈರದೇವರ ದೇವಸ್ಥಾನದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಗೆ 1898ನೆ ಸೆಪ್ಟಂಬರ್. 21ನೆ ಮತ್ತು ಂ 395ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ನೊಕರರ್ಮಾಡಲ್ಪಟ್ಟಿದ್ದ ಇದರ ಬಾಜೂದಲ್ಲಿ ನಮೂದು ಮಾಡಲ್ಪಟ್ಟ ಧರ್ಮದರ್ಶಿಗಳು ಸದರೀ ದೇವಸ್ಥಾನದ ಕೆಲವು ನಗಗಳನ್ನು ಅಪಹರಿಸಿರುವದಾಗಿ ಕಾಣಬಂದಿರುವದ್ದರಿಂದ ಧರ್ಮದರ್ಶಿಗಳ ಕೆಲಸದಿಂದ ತೆಗೆದುಹಾಕಲ್ಪಟ್ಟಿರುತ್ತಾರೆ. ಮತ್ತು ಇವರುಗಳಿಗೆ ಬದಲಾಗಿ ವೊದಲೇ ಧರ್ಮದರ್ಶಿಯರಾಗಿದ್ದ ಬಾಚೆಹಳ್ಳಿಯ ಪಟೇಲರಾದ ಮು|| ರಾ|| ರಾ|| ಚಿಕ್ಕರಾಮೆಗೌಡರೊಂದಿಗೆ ಇದರಡೀ ಕಂಡ 4 ಜನ ದೊಡ್ಡ ಮನುಷ್ಯರು ನೊಕರರ್ಮಾಡಲ್ಪಟ್ಟಿರುತ್ತಾರೆ :—

ವಡೇರಹಳ್ಳಿ ಜೋಗಿ ಗೌಡರು.
" ಗುಡ್ಡೆಗೌಡರು.
" ಕರಡಿ ನಂಜಯ್ಯನವರು.
ದುಗಡಿಹಳ್ಳಿ ಸಿದ್ದೇಗೌಡರು.
" ಕಾಡಯ್ಯನ ಲಿಂಗೇಗೌಡರು.
ಬಲ್ಲೇನಹಳ್ಳಿ ಮುರುಡಯ್ಯನ ನಂಜಯ್ಯನವರು.
ಕಾರೆಹಳ್ಳಿ ಗವೀಗೌಡರು.

ಮು|| ರಾ|| ರಾ|| ದುಗಡಿಹಳ್ಳಿಯ ಪಟೇಲರಾದ ರಾಮಣ್ಣನವರು.
" ರಾಮಣ್ಣನವರ ಕೊವೂರರಾದ ದುಗಡಿಹಳ್ಳಿಯ ಲಕ್ಕಣ್ಣನವರು.
" ಬಾಚೆಹಳ್ಳಿಯ ಶಾನಭೋಗರಾದ ಭೈರಪ್ಪನವರು.
" ಹಿತ್ತಲ ಮನೆ ಭೈರಣ್ಣ ಬಿ ವಡೇರಹಳ್ಳಿಯ ಚಿಕ್ಕಣ್ಣನವರು.

ಹುಕುಂ ಬವೋಜೀಬ್,
ಎಲ್. ಅನಂತಸ್ವಾಮಿರಾವ್,
ಮುಜರೈ ಇಲಾಖೆಯ ಸೆಕ್ರೆಟರಿ.